**ಓ.ಎಸ್. ನಂಃ 5/2020**
**<u>ಪಿಡಬ್ಲ್ಯೂ:2</u>**

**ದಿನಾಂಕಃ 11-01-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಜಿ.ಬಿ.ಆರ್. ವಕೀಲರಿಂದಃ</u>**

1. ನಾನು ಗುರುಮಠಕಲಿನ ಕಂದೂರು ಓಣಿಯಲ್ಲಿ ವಾಸವಿರುತ್ತೇನೆ. 1ನೇ ಪ್ರತಿವಾದಿಯು ಸಹ ಕಂದೂರು ಓಣಿಯಲ್ಲಿ ವಾಸವಿರುತ್ತಾರೆ. ನಾನು ಮತ್ತು 8ನೇ ಪ್ರತಿವದಿಯು ಸ್ನೇಹಿತರಲ್ಲ ಆದರೆ ನಾವಿಬ್ಬರು ಅಕ್ಕ-ಪಕ್ಕದ ಮನೆಯವರು. 1ನೇ ಪ್ರತಿವಾದಿಯ ತಂದೆಯಾದ ನಾರಾಯಣ ಮನ್ನೆ ಇವರಿಗೆ ಎಷ್ಟು ಜನ ಸಹೋದರರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯ ಕುಟುಂಬಕ್ಕೆ ದಾವಾ ಆಸ್ತಿಗಳು ಮತ್ತು ಸರ್ವೆ ನಂ.225, 226, 227 ನೇದ್ದರಲ್ಲಿ ಜಮೀನುಗಳು ಇದ್ದವು. ಸರ್ವೆ ನಂ.225, 226, 227 ನೇದ್ದರಲ್ಲಿ ಜಮೀನುಗಲ್ಲಿ ಪಾಲು ವಿಭಜನೆ ಆಗಿರುತ್ತದೆಯೋ ಇಲ್ಲವೊ ನನಗೆ ಗೊತ್ತಿಲ್ಲ.

2. 1ನೇ ಪ್ರತಿವಾದಿಯ ತಂದೆಯಾದ ನಾರಾಯಣ ಮನ್ನೆ ಇವರಿಗೆ ಈರಪ್ಪ ಮತ್ತು ಶರಣಪ್ಪ ಎನ್ನುವ ಇಬ್ಬರು ಸಹೋದದರು ಇದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈರಪ್ಪ ಮತ್ತು ಶರಣಪ್ಪ ಇವರು ತಮ್ಮ ಕುಟುಂಬದೊಂದಿಗೆ ನಮ್ಮ ಓಣಿಯಲ್ಲಿಯೇ ವಾಸವಿದ್ದಾರೆ ಎಂದರೆ ಸರಿಯಲ್ಲ. ಈರಪ್ಪ ಮತ್ತು ಶರಣಪ್ಪ ಇವರು ನಮ್ಮ ಓಣಿಯಲ್ಲಿಯೇ ವಾಸವಿದ್ದರು ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

3. 1ನೇ ಪ್ರತಿವಾದಿಗೆ ನಾಲ್ಕು ಜನ ಸಹೋದರರು ಇರುತ್ತಾರೆ. ಅವರ ಹೆಸರು 5ನೇ ಪ್ರತಿವಾದಿಯಾದ ಮಾಣಿಕ್ಯಪ್ಪ, 4ನೇ ಪ್ರತಿವಾದಿಯಾದ ವೆಂಕಟರಾಮುಲು, 3ನೇ ಪ್ರತಿವಾದಿಯಾದ ಹಣಮಂತು ಮತ್ತು ಇನ್ನೊಬ್ಬ ಸಹೋದರನ ಹೆಸರು ಈಗ ನೆನಪಿಗೆ

ಬರುತ್ತಿಲ್ಲ. ನಾನು ನೋಡಿದಾಗಿನಿಂದಲೂ 1ನೇ ಪ್ರತಿವಾದಿ ಮತ್ತು ಅವರ ಸಹೋದರರು ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ ಆದರೆ ಅವರ ಮಧ್ಯೆ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ವಿಭಜನೆ ಆಗಿರುವುದಿಲ್ಲ.

4. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ಇಲ್ಲಿಯವರಗೂ ಪಾಲು ವಿಭಜನೆ ಆಗಿರುವುದಿಲ್ಲ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯ ಒಟ್ಟು ವಿಸ್ತೀರ್ಣ 02 ಎಕರೆ 39 ಗುಂಟೆ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದ ಉಳಿದ ಸರ್ವೆ ನಂಬರುಗಳಲ್ಲಿ ಒಟ್ಟು ವಿಸ್ತೀರ್ಣದ ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ರ ಆಸ್ತಿಯ ಒಟ್ಟು ವಿಸ್ತೀರ್ಣ 02 ಎಕರೆ 39 ಗುಂಟೆ ಇರುತ್ತದೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯ ಒಟ್ಟು ವಿಸ್ತೀರ್ಣ 05 ಎಕರೆ 10 ಗುಂಟೆ ಇರುತ್ತದೆ ಎಂದರೆ ಸರಿಯಲ್ಲ.

5. ದಾವಾ ಐಟಂ ನಂ.1 ಆಸ್ತಿಯಲ್ಲಿ 02 ಎಕರೆ 30 ಗುಂಟೆ ಜಮೀನು 1ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.1 ರ ಆಸ್ತಿಯ ಉಳಿದ ವಿಸ್ತೀರ್ಣದ ಜಮೀನು 1ನೇ ಪ್ರತಿವಾದಿಯ ಸಹೋದರರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯು ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿಗೆ 1ನೇ ವಾದಿ, 6ನೇ ಪ್ರತಿವಾದಿಯ ಗಂಡನಾದ ಶಂಕರ್ ಮತ್ತು 12ನೇ ಪ್ರತಿವಾದಿಯ ಗಂಡನಾದ ರವಿ ಎಂದು ಮೂರು ಜನ ಮಕ್ಕಳು ಎಂದರೆ ಸರಿ.

6. 1ನೇ ವಾದಿಯ ವಿವಾಹವು ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. 1ನೇ ವಾದಿಯ ವಿವಾಹದ ಕಾಲಕ್ಕೆ 1ನೇ ಪ್ರತಿವಾದಿ ಅವರಿಗೆ ಏನು ಸಹ ಕೊಟ್ಟಿರುವುದಿಲ್ಲ ಎನ್ನುವ ವಿಷಯವನ್ನು ನಾನು ನಮ್ಮ ಊರಿನ ಹಿರಿಯರಾದ ಗೋಪಾಲ, ಬಾಲಪ್ಪ ಮತ್ತು ನನ್ನ ತಂದೆಯಾದ ರಾಜಪ್ಪ ಇವರು ಹೇಳುವುದನ್ನು ಕೇಳಿರುತ್ತೇನೆ. 1ನೇ ವಾದಿಯ ವಿವಾಹದ ಕಾಲಕ್ಕೆ 1ನೇ ಪ್ರತಿವಾದಿ ಅವರಿಗೆ ಏನು ಸಹ ಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

7. ದಾವಾ ಐಟಂ ನಂ.1 ರ ಆಸ್ತಿಯು ಊರಿಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಗನಾದ ರವಿ ಇವರು ಮರಣಹೊಂದಿರುತ್ತಾರೆ ಎಂದರೆ ಸರಿ. ಸದರಿ ರವಿ ಇವರು ಅಂದಾಜು 10 ವರ್ಷಗಳು ಆಗಿರಬಹುದು. 12 ನೇ ಪ್ರತಿವಾದಿ ಸದರಿ ರವಿ ಇವರ ಹೆಂಡತಿ, 13 ನೇ ಪ್ರತಿವಾದಿ ರವಿ ಇವರ ಒಬ್ಬಳೇ ಮಗಳು ಎಂದರೆ ಸರಿ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ತನ್ನ ಹಿಸ್ಸೆಗೆ ಬಂದ 02 ಎಕರೆ 30 ಗುಂಟೆ ಜಮೀನಿನಲ್ಲಿ ಪ್ಲಾಟುಗಳನ್ನು ಮಾಡಿ ಅವುಗಳನ್ನು 1 ನೇ ಪ್ರತಿವಾದಿಯೇ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ತನ್ನ ಹಿಸ್ಸೆಗೆ ಬಂದ 02 ಎಕರೆ 30 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯು ಬೇರೆಯವರಿಗೆ ಮಾರಾಟ ಮಾಡಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

8. ದಾವಾ ಐಟಂ ನಂ.1 ರ ಆಸ್ತಿಯ ಕಂದಾಯ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಾನು ಬಿ.ಎ ಪದವೀದರನಾಗಿರುತ್ತೇನೆ. ಸಾಕ್ಷಿಗೆ ಈಗ ದಾವಾ ಐಟಂ ನಂ.1 ರ ಪಹಣಿಯನ್ನು ತೋರಿಸಿ ಅದರಲ್ಲಿ ಖರೀದಿದಾರರ ಹೆಸರು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ದಾವಾ ಐಟಂ ನಂ.1 ರ ಆಸ್ತಿಯು ಮಾರಾಟ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಐಟಂದ ನಂ.1 ರ ಆಸ್ತಿಯನ್ನು 1 ನೇ ಪ್ರತಿವಾದಿಯು ಹುಸೇನಪ್ಪ ತಂದೆ ಬಂದೆಪ್ಪ, ತಮ್ಮಪ್ಪ ತಂದೆ ಸಾಯಪ್ಪ ಮತ್ತು ಕೃಷ್ಣಮೂರ್ತಿ ತಂದೆ ಮಲ್ಲಿಕಾರ್ಜುನ, ನರಸಪ್ಪ ತಂದೆ ತಮ್ಮಪ್ಪ, ಮೊಗಲಪ್ಪ ತಂದೆ ಕಾಮಾಶ, ಬಸಮ್ಮ ತಂದೆ ಬಾಲಪ್ಪ ಮಜ್ಜಿಗೆ, ಬೀಮಶಪ್ಪ ತಂದೆ ಶರಣಪ್ಪ, ಸಾಬಣ್ಣ ತಂದೆ ತಮ್ಮಣ್ಣ ಮತ್ತು ಇತರರಿಗೆ ಮಾರಾಟ ಮಾಡಿದ ಕಾರಣ ಅವರ ಹೆಸರು ದಾವಾ ಐಟಂ ನಂ.1 ರ ಅಸ್ತಿಯ ಪಹಣಿಯಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ.

9. ದಾವಾ ಐಟಂ ನಂ.1 ಆಸ್ತಿಯನ್ನು ಮಾರಾಟ ಮಾಡಲು 1 ನೇ ಪ್ರತಿವಾದಿಯ ಕಟುಂಬಕ್ಕೆ ಯಾವುದೇ ಅವಶ್ಯಕತೆ ಇಲ್ಲದಿರುವುದರಿಂದ ಅದನ್ನು 1 ನೇ ಪ್ರತಿವಾದಿ ಮಾರಾಟ ಮಾಡಬಾರದು ಎಂದು 12 ಮತ್ತು 13 ನೇ ಪ್ರತಿವಾದಿಯರು ತಕರಾರು ಪಡಿಸಿರುತ್ತಾರೆ ಎಂದರೆ ಸರಿ. 12 ಮತ್ತು 13 ನೇ ಪ್ರತಿವಾದಿಯರು ದಾವಾ ಐಟಂ ನಂ.1 ರ ಆಸ್ತಿಯನ್ನು ಮಾರಾಟ ಮಾಡಲು ತಕರಾರು ಪಡಿಸಿದಾಗ 1 ನೇ ಪ್ರತಿವಾದಿಯು ಅವರ ವಿರುದ್ದ ಹಕ್ಕು

ಘೋಷಣೆ ಕೋರಿ ಅಸಲು ದಾವೆ ನಂ.174/2010 ರಂತೆ ದಾವೆಯನ್ನು ಹೂಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

10. ಸದರಿ ದಾವೆಯು ದಿನಾಂಕ 16.09.2012 ರಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯು ವಜಾಗೊಂಡ ನಂತರ ಊರಿನಲ್ಲಿ ನ್ಯಾಯ ಪಂಚಾಯತಿ ಆಗಿರುತ್ತದೆ ಎಂದರೆ ಸಾಕ್ಷಿಯು ನ್ಯಾಯ ಪಂಚಾಯತಿ ಆಗಿರುವುದು ನಿಜ ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ಮೇಲೆ ಹೇಳಿದ ವ್ಯಕ್ತಿಗಳಿಗೆ ಮಾರಟ ಮಾಡಿದ ವಿಸ್ತೀರ್ಣದ ಜಮೀನನ್ನು ಹೊರತು ಪಡಿಸಿ ಉಳಿದ ವಿಸ್ತೀರ್ಣದ ಜಮೀನಾದ 01 ಎಕರೆ 03 ಗುಂಟೆ ಜಮೀನನ್ನು ಸದರಿ ನ್ಯಾಯ ಪಂಚಾಯತಿ ಅಡಿಯಲ್ಲಿ 1 ನೇ ಪ್ರತಿವಾದಿ 12 ಮತ್ತು 13 ನೇ ಪ್ರತಿವಾದಿಯರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಇನ್ನು 01 ಎಕರೆ 04 ಗುಂಟೆ ಜಮೀನನ್ನು 6 ನೇ ಪ್ರತಿವಾದಿಯ ಗಂಡನಾದ ಶಂಕರ್ ಇವರ ಹಿಸ್ಸೆಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ 01 ಎಕರೆ 04 ಗುಂಟೆ ಜಮೀನು 1 ನೇ ಪ್ರತಿವಾದಿಯಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ದಾವಾ ಅಸ್ತಿ ಐಟಂ ನಂ.1 ರಲ್ಲಿ 01 ಎಕರೆ 04 ಗುಂಟೆ ಜಮೀನು 1 ನೇಪ್ರತಿವಾದಿಯ ಹೆಸರಿನಲ್ಲಿ ಇರುವುದು ನಿಜ, ಅದರೆ ಸದರಿ ಜಮೀನನ್ನು 1 ನೇ ಪ್ರತಿವಾದಿಯು 6 ನೇ ಪ್ರತಿವಾದಿಯ ಗಂಡನಾದ ಶಂಕರ್ ಇವರಿಗೆ ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯು 12 ಮತ್ತು 13 ನೇ ಪ್ರತಿವಾದಿಯರಿಗೆ ಕೊಟ್ಟ 01 ಎಕರೆ 03 ಗುಂಟೆ ಜಮೀನಿನ ಪಹಣಿಯಲ್ಲಿ 13 ನೇ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಅವರು ತಮ್ಮ ಹೆಸರಿಗೆ ಸದರಿ ಆಸ್ತಿಯನ್ನು ವರ್ಗಾವಣೆ ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಊರಿನಲ್ಲಿ ನಡೆದ ನ್ಯಾಯ ಪಂಚಾಯತಿಯಲ್ಲಿ 1 ನೇ ಪ್ರತಿವಾದಿಯು ಮೇಲೆ ಹೇಳಿದ ರೀತಿಯಲ್ಲಿ ಪಾಲು ವಿಭಜನೆ ಮಾಡಿಕೊಟ್ಟ ಕಾರಣ ಸದರಿ 01 ಎಕರೆ 03 ಗುಂಟೆ ಜಮೀನಿನ ಪಹಣಿಯಲ್ಲಿ 13 ನೇ ಪ್ರತಿವಾದಿಯ ಹಸೆರು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 21.01.2003 ರಂದು ಸದರಿ ಪಾಲು ವಿಭಜನೆಯ ಪ್ರಕಾರ 1 ನೇ ಪ್ರತಿವಾದಿಯು ವಾಟನಿ ಪತ್ರಿಕೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ

ಆಧಾರದ ಮೇಲೆ ದಾವಾ ಐಟಂ ನಂ.1 ರ 01 ಎಕರೆ 03 ಗುಂಟೆ ಜಮೀನಿನ ಪಹಣಿಯಲ್ಲಿ 13 ನೇ ಪ್ರತಿವಾದಿಯ ಹಸೆರು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ.

11. ದಾವಾ ಐಟಂ ನಂ.1 ರ ಆಸ್ತಿಯ ಉಳಿದ ವಿಸ್ತೀರ್ಣದ ಜಮೀನುಗಳನ್ನು ಮಾರಾಟ ಮಾಡಿ ಬಂದ ಹಣವನ್ನು 1 ನೇ ಪ್ರತಿವಾದಿಯು 1 ನೇ ವಾದಿಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಾನು ವಾದಿಯ ಮಾತು ಕೇಳಿ ಸುಳ್ಳು ಕತೆ ಕಟ್ಟಿ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಮತ್ತು ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ :</u>** ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ